**9 ನೆಯ ತರಗತಿಯ ಮಾದರಿ ಪ್ರಶ್ನೆ ಪತ್ರಿಕೆ : 2019-20**

ವಿಷಯ : **ಪ್ರಥಮ ಭಾಷೆ – ಕನ್ನಡ** (01-K)

**1**

ಸಮಯ : 3-00 ಗಂಟೆ, ಅಂಕಗಳು : 100

---

**ಸೂಚನೆಗಳು : * ಪ್ರಶ್ನೆ ಪತ್ರಿಕೆಯು** 45 **ಪ್ರಶ್ನೆಗಳನ್ನು ಒಳಗೊಂಡಿದೆ. * ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. * ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.**

I) **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ.** 6 x 1 = 6

1) ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

ಎ) ಅಲ್ಪವಿರಾಮ ಬಿ) ವಾಕ್ಯವೇಷ್ಟನ

ಸಿ) ಉದ್ಧರಣ ಡಿ) ಪ್ರಶ್ನಾರ್ಥಕ

2) 'ಬ್ಯಾರೆ' ಪದದ ಗ್ರಾಂಥಿಕ ರೂಪ

ಎ) ಬೇರೆ ಬಿ) ಬೇಟೆ

ಸಿ) ಬರೋಬ್ಬರಿ ಡಿ) ಸರಿ

3) ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯ

ಎ) ಸರಳವಾಕ್ಯ ಬಿ) ಸಾಮಾನ್ಯ ವಾಕ್ಯ

ಸಿ) ಸಂಯೋಜಿತ ವಾಕ್ಯ ಡಿ) ಮಿಶ್ರವಾಕ್ಯ

4) ಷಷ್ಠಿ ವಿಭಕ್ತಿಯ ಕಾರಕಾರ್ಥ

ಎ) ಸಂಪ್ರದಾನ ಬಿ) ಅಪಾದಾನ

ಸಿ) ಸಂಬಂಧ ಡಿ) ಅಧಿಕರಣ

5) 'ಅತ್ಯಾದರ' ಪದವು ಈ ಸಂಧಿಗೆ ಉದಾಹರಣೆ

ಎ) ವೃದ್ಧಿ ಬಿ) ಗುಣ

ಸಿ) ಯಣ್ ಡಿ) ಅನುನಾಸಿಕ

6) ಗುರು–ಲಘು ಮೂರಿರೆ

ಎ) ಮ–ನ ಗಣ ಬಿ) ಭ–ಯ ಗಣ

ಸಿ) ಜ–ರ ಗಣ ಡಿ) ಸ–ತ ಗಣ

II) **ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದಂತೆ ಪದವನ್ನು ಬರೆಯಿರಿ** 4 x 1 = 4

7) ಉದ್ಯೋಗ : ಉಜ್ಜುಗ : :
ಆಮಂತ್ರಣ : ................

8) ಹುಳುಹುಪ್ಪಡಿ : ಜೋಡುನುಡಿ : :
ಅಬ್ಬಬ್ಬಾ : ................

9) ಬಳರಿ : ಮಾರಿ : :
ನೀರಜ : ................

10) ನಿತ್ಯ : ನಿಚ್ಚ : :
ವೈಶಾಖ : ................

III) **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** 7 x 1 = 7

11) ಮೌಲ್ವಿ ಹಿಡಿದಿದ್ದ ಕನ್ನಡದ ಪುಸ್ತಕ ಯಾವುದು ?

12) ಬುಕ್ಕರಾಯನ ಹಿರಿಮೆ ಏನು ?

13) ಚೋಳರ ಮತ್ತು ಹೊಯ್ಸಳರ ನಡುವೆ ಎಲ್ಲಿ ಯುದ್ಧ ನಡೆಯಿತು ?

14) ನಂಬಿಯಣ್ಣನ ಪೂರ್ವಜನ್ಮದ ಹೆಸರೇನು ?

15) ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು ?

16) ಯಾರ ಸ್ನೇಹವನ್ನು ಮಾಡಿ ಕೆಡಬಾರದು ?

17) ರಂಜಾನ್ ಹಬ್ಬದ ಸಮಯದಲ್ಲಿ ತಯಾರಿಸುವ ಖಾದ್ಯಗಳು ಯಾವುವು ?

IV) **ಕೆಳಗಿನ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 10 x 2 = 20

18) ರಾಧಾಕೃಷ್ಣನ್ ಅವರ ವೇಷಭೂಷಣಗಳ ಬಗ್ಗೆ ಬರೆಯಿರಿ

19) ರಾಧಾಕೃಷ್ಣನ್ ಅವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಯಾವುವು ?

20) ಶಾಂತಲೆಯು ನೀಡಿದ ತೀರ್ಪೇನು ?

21) ಚೋಳದೇಶದಲ್ಲಿದ್ದ ಮೂರು ಗ್ರಮಾಗಳನ್ನು ಹೆಸರಿಸಿ.

22) ಮುತ್ತಿನ ಸತ್ತಿಗೆಯ ವಿಶೇಷತೆ ಏನು ?

23) ಗಾನರಾಣಿಯರು ಹರಿಶ್ಚಂದ್ರನನ್ನು ಏನೆಂದು ಕೀರ್ತಿಸಿ ಹಾಡಿದರು ?

24) ಪಂಢರಿಬಾಯಿಯವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು ?

25) ನನ್ನಾಸೆ ಕವನದಲ್ಲಿ ಕವಯಿತ್ರಿಯವರ ಆಸೆಗಳೇನು ?

26) ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳಾವುವು ?

27) ಪುಟ್ಟ ಹಕ್ಕಿಯ ಆಶಯಗಳೇನು ?

V) **ಕೆಳಗಿನ ಸಾಹಿತಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ ಬಿರುದುಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ** 2 x 3 = 6

28) ಭಾಸ

29) ಕಡಕೋಳ ಮಡಿವಾಳಪ್ಪ

VI) **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ** 1 x 3 = 3

30) ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಂಬಮಲ್ಲದೊಪ್ಪುವ ಚೆಂದಂ ॥

VII) **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ** 1 x 3 = 3

31) ಹರಿದು ಬಿಸಾಡಿದ ಕಾಗದದ ಚೂರುಗಳು ನಕ್ಷತ್ರಗಳಂತೆ ಹೊಳೆಯುತ್ತಿದ್ದವು.

VIII) **ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಅದರ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ** 1 x 3 = 3

32) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

– ಅಥವಾ –

ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು

IX) **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ** 6 x 3 = 18

33) "ನಿಮಗೆ ಕನ್ನಡ ಬರುತ್ತದೆಯೇ ?"

34) "ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು"

35) "ಸ್ವಾಮಿ ನಮ್ಮಯ ದೇವರು ಬಂದಾನ ಬನ್ನಿರೇ"

36) "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ"

37) "ಬುದ್ಧನೆಂದರೆ ಕರುಣೆ ಬುದ್ಧನೆಂದರೆ ಬೆಳಕು"

38) "ಕಟ್ಟುಗೆ ಕಟ್ಟುದಿರ್ಕೆ ಕಡಲಂ ಕಪಿಸಂತತಿ"

X) **ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ** 1 x 4 = 4

39) ನವಭಾವ ....................
..............................................
..............................................
..................... ಯೇರಬೇಕು ।

**ಅಥವಾ**

ಉನ್ನತೋನ್ನತ .................
..............................................
..............................................
........................... ಬೆನ್ನಟ್ಟಬೇಕು ।

XI) **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ** 1 x 4 = 4

40) ಕಿರಿವೞಿಯದ ಶುಭಲಕ್ಷಣ
ದೞಿಕೆಯ ಸತ್ಕುಲದ ಮರ್ತ್ಯಯುಗಲಕಮಂ ತಾ
ನೞಿಸಲ್ ಬಳರಿಯ ಬನದಿಂ
ಪೊಱಮಟ್ಟಂ ಚಂಡಕರ್ಮನೆಂಬ ತಳಾಱಂ

XII) **ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 2 x 4 = 8

41) ಜಯಪುರದ ಜನರಿಗೆ ಬಣ್ಣಗಳ ಬಗೆಗೆ ಇರುವ ಮೋಹವನ್ನು ತಿಳಿಸಿ.

ಅಥವಾ

ಜಂತ್ರ-ಮಂತ್ರದ ವಿಶೇಷತೆಯನ್ನು ಬರೆಯಿರಿ.

42) ಭರತ ಚಕ್ರವರ್ತಿಯ ರಾಜದರ್ಬಾರಿನ ವೈಭವವನ್ನು ವಿವರಿಸಿ.

ಅಥವಾ

'ಸಿರಿಯನಿನ್ನೇನ ಬಣ್ಣಿಪೆನು' ಪದ್ಯದ ಸಾರಾಂಶವನ್ನು ಸಂಕ್ಷಿಪ್ತವಾಗಿ ಬರೆಯಿರಿ.

XIII) **ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ** 2 + 2 = 4

ವಿಶ್ವದ ಬಹುಭಾಷಾ ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ. ಭಾಷೆಗಳನ್ನು ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆ ಎಂದು ವಿಂಗಡಿಸಲಾಗಿದೆ. ವ್ಯಾವಹಾರಿಕ ಎಂದರೆ ಜೀವದ್ಭಾಷೆ. ಇದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಉದಾಹರಣೆ : ಕನ್ನಡ, ತುಳು, ಕೊಂಕಣಿ, ಮರಾಠಿ ಇತ್ಯಾದಿ. ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಬಳಸುವ ಭಾಷೆಯೇ ಗ್ರಾಂಥಿಕ ಭಾಷೆ. ಉದಾಹರಣೆ : ಕನ್ನಡ, ಇಂಗ್ಲೀಷ, ಹಿಂದಿ, ಸಂಸ್ಕೃತ ಇತ್ಯಾದಿ. ಎಲ್ಲಾ ಗ್ರಾಂಥಿಕ ಭಾಷೆಗಳು ವ್ಯವಹಾರಿಕವಾಗಬೇಕಿಲ್ಲ. ಹಾಗೆಯೇ ಎಲ್ಲಾ ವ್ಯವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕೆಂಬ ನಿಯಮವಿಲ್ಲ. ತುಳು ಒಂದು ಸುಂದರ ವ್ಯವಹಾರಿಕ ಭಾಷೆ. ಆದರೆ ಗ್ರಾಂಥಿಕ ಭಾಷೆಯಲ್ಲ. ದೇವಭಾಷೆ ಎನಿಸಿರುವ ಸಂಸ್ಕೃತ ಗ್ರಾಂಥಿಕ ಭಾಷೆಯಾಗಿದೆ. ಆದರೆ ಯಾವ ಪ್ರದೇಶದಲ್ಲಿಯೂ ವ್ಯಾವಹಾರಿಕವಾಗಿಲ್ಲ. ನವ ಶಿಲಾಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಜಿಸಿ, ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಯನ್ನು ಹೊಂದಲು ಪ್ರಾರಂಭಿಸಿದಂದಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಓದು ಬರಹ ಬಾರದೇ ಇದ್ದರೂ ತಾನು ಕೆಲಸಕ್ಕೆ ಹೋದ ದಿನಗಳನ್ನು ದಿನನಿತ್ಯ ಗೋಡೆಯ ಮೇಲೆ ಒಂದೊಂದು ಗೆರೆ ಎಳೆದು ಗುರುತಿಸಿ, ಕೊನೆಯಲ್ಲಿ ಲೆಕ್ಕ ಹಾಕಿ, ಸಂಬಳ ಪಡೆಯುತ್ತಿದ್ದನು. ಇದನ್ನು ಲಿಪಿಯ ಉಗಮ ಕಾಲ ಎನ್ನುವರು.

**ಪ್ರಶ್ನೆಗಳು** :

ಅ) ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಗಳಿಗಿರುವ ವ್ಯತ್ಯಾಸಗಳೇನು ?

ಆ) ಲಿಪಿಯ ಉಗಮ ಹೇಗಾಯಿತು ?

XIV) **ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಯಾವುದಾದರೂ ಒಂದಕ್ಕೆ ಪತ್ರವನ್ನು ಬರೆಯಿರಿ** 1 x 5 = 5

44) ನಿಮ್ಮ ಶಾಲೆಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ಕೋರಿ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಸಂಕೇಶ್ವರದ ಕನ್ಯಾ ಪ್ರೌಢ ಶಾಲೆಯಲ್ಲಿ ಓದುತ್ತಿರುವ 'ಕೋಮಲ' ಎಂದು ಭಾವಿಸಿಕೊಂಡು ನೀವು ಮಾಡಿರುವ ಶೈಕ್ಷಣಿಕ ಪ್ರವಾಸದ ಕುರಿತು ಮುಧೋಳದಲ್ಲಿರುವ ನಿಮ್ಮ ಸಹೋದರಿ 'ಕವಿತಾ' ಗೆ ಪತ್ರವನ್ನು ಬರೆಯಿರಿ.

XV) **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ನಿಬಂಧ ಬರೆಯಿರಿ** 1 x 5 = 5

45) ಸಾಮಾಜಿಕ ಪಿಡುಗುಗಳು

ಅಥವಾ

ರಾಷ್ಟ್ರೀಯ ಭಾವೈಕ್ಯತೆ

<><><><><>

**9 ನೆಯ ತ॥ ಮಾದರಿ ಪ್ರಶ್ನೆ ಪತ್ರಿಕೆ – 2 : 2019–20**

ವಿಷಯ : **ಪ್ರಥಮ ಭಾಷೆ – ಕನ್ನಡ** (01-K) **2**

ಸಮಯ : 3-00 ಗಂಟೆ, ಅಂಕಗಳು : 100

---

**ಸೂಚನೆಗಳು :** * **ಪ್ರಶ್ನೆ ಪತ್ರಿಕೆಯು** 45 **ಪ್ರಶ್ನೆಗಳನ್ನು ಒಳಗೊಂಡಿದೆ.** * **ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.** * **ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.**

I) **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ.** 6 x 1 = 6

1) ಕನ್ನಡ ವರ್ಣಮಾಲೆಯಲ್ಲಿನ ದಂತ್ಯಾಕ್ಷರಗಳವು

ಎ) ಕ – ವರ್ಗ ಬಿ) ತ – ವರ್ಗ

ಸಿ) ಪ – ವರ್ಗ ಡಿ) ಚ – ವರ್ಗ

2) 'ದೃಷ್ಟಿ' ಪದದ ತದ್ಭವ ರೂಪ

ಎ) ದೃತಿ ಬಿ) ದೂಷ್ಟಿ

ಸಿ) ದಿಟ್ಟಿ ಡಿ) ದಟ್ಟಿ

3) 'ಸೂರ್ಯ' ಪದದ ಸಮಾನಾರ್ಥಕ ಪದವಿದು

ಎ) ಬಾನು ಬಿ) ಅರ್ಕ

ಸಿ) ಆಗಸ ಡಿ) ಮೇಘ

4) 'ಪೆರ್ಮರ' ಈ ಪದ ಯಾವ ಸಮಾಸಕ್ಕೆ ಉದಾಹರಣೆಯಾಗಿದೆ ?

ಎ) ತತ್ಪುರುಷ ಬಿ) ದ್ವಂದ್ವ

ಸಿ) ಕರ್ಮಧಾರೆಯ ಡಿ) ಬಹುವ್ರೀಹಿ

5) ಈಗೀಗ – ಪದದ ವ್ಯಾಕರಣ ವಿಶೇಷ ಇದು

ಎ) ಪಡೆನುಡಿ ಬಿ) ದ್ವಿರುಕ್ತಿ

ಸಿ) ಜೋಡುನುಡಿ ಡಿ) ನುಡಿಗಟ್ಟು

6) ಇವುಗಳಲ್ಲಿ ದೇಶೀಯ ಪದ

ಎ) ಅರ್ಜಿ ಬಿ) ಕಾರು

ಸಿ) ಕೊಠಡಿ ಡಿ) ಮೇಜು

II) **ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದಂತೆ ಪದವನ್ನು ಬರೆಯಿರಿ** 4 x 1 = 4

7) ಮಳೆಗಾಲ : ಆದೇಶ ಸಂಧಿ : :
ಸನ್ಮಾನ : ....................

8) ಗಡ : ಕೋಟೆ : :
ದಿವಿ : ....................

9) ಹಾಡುತ್ತೇನೆ : ಉತ್ತಮ ಪುರುಷ : :
ಆಡುತ್ತಾನೆ : ....................

10) ಬರ್ತಾರೆ : ಬರುತ್ತಾರೆ : :
ಕಳುವ್ಯಾರೆ : ....................

III) **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** 7 x 1 = 7

11) ದೇವರ ದಯೆ ನಾವಿಬ್ಬರೂ ಸೇರಿದೆವು – ಇಲ್ಲಿ ನಾವಿಬ್ಬರು ಎಂದರೆ ಯಾರು ಯಾರು ?

12) ಜಯಪುರದ ಜನರಿಗೆ ಯಾವ ಯಾವ ಬಣ್ಣಗಳು ಇಷ್ಟ ?

13) ವೀರಗಾಸೆಯಲ್ಲಿ ಬಳಸುವ ವಾದ್ಯಗಳಾವುವು ?

14) ದುರ್ಯೋಧನನು ನೆಲಕ್ಕುರುಳಿದ ಭೀಮನನ್ನು ಏನೆಂದು ಮೂದಲಿಸುತ್ತಾನೆ ?

15) ಕಡಿದೊಗೆಯಬೇಕಾದ ಪಾಶಗಳು ಯಾವುವು ?

16) ವನದಲ್ಲಿ ಅರಗಿಳಿಗಳು ಏನೆಂದು ಉಲಿಯುತ್ತಿದ್ದವು ?

17) ಜಗದಲ್ಲಿ ಎಂತಹ ಜನರಿರುವರು ?

IV) **ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 10 x 2 = 20

18) ರಾಮಾನುಜಾಚಾರ್ಯರ ಗುಣವಿಶೇಷತೆ ಏನು ?

19) ಜೈನ ಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು ?

20) ಚೌಕಿಯಲ್ಲಿ ನಡೆಯುವ ವಿಶೇಷತೆಗಳೇನು ?

21) ದುರ್ಜಯ ತನ್ನ ಬಳಿ ಬರುತ್ತಿರುವುದನ್ನು ಕಂಡು ದುರ್ಯೋಧನನು ಏನೆಂದುಕೊಳ್ಳುತ್ತಾನೆ ?

22) ಧ್ಯಾನ ಬೇಸರವಾದಾಗ ಏನು ಮಾಡುತ್ತೇನೆಂದು ಕವಿ ಹೇಳುತ್ತಾನೆ ?

23) ಬೇರೆ ಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ಬಯಸುತ್ತಾನೆ ?

24) ನನ್ನಾಸೆ ಕವನದಲ್ಲಿ ಕವಯಿತ್ರಿಯವರ ಆಸೆಗಳೇನು ?

25) ಪಂಢರಿಬಾಯಿ ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು ?

26) ಹೆಂಗಸರು ಗೋಲಾಗಿ ನಿಂತು ಹಾಡುತ್ತಿದ್ದ ಛುಲಾಯಿ ಹಾಡು ಯಾವುದು ?

27) ದುರ್ಗಪ್ಪನ ಯಾವ ಮಾತುಗಳು ಹೋರಾಟಗಾರರ ಕೈಕಾಲು ಉಕ್ಕಿನಂಗೆ ಆಗುವಂತೆ ಮಾಡುತ್ತಿದ್ದವು ?

V) **ಕೆಳಗಿನ ಸಾಹಿತಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ ಬಿರುದುಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ** 2 x 3 = 6

28) ಗೊರೂರು ರಾಮಸ್ವಾಮಿ ಅಯ್ಯಂಗಾರ

29) ಜನ್ನ

VI) **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ** 1 x 3 = 3

30) ಸಿಸಿರಿಮನೆ ಪಡೆದು ಪರಕೆಗೆ
ವಸಂತನಲವ್ರೋದ ಮಾವಿನಡಿಮಂಚಿಕೆಯೊಳ್

VII) **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ** 1 x 3 = 3

31) ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು

VIII) **ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಅದರ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ** 1 x 3 = 3

32) ಆರೋಗ್ಯವೇ ಭಾಗ್ಯ – ಅಥವಾ –
ಕೊಟ್ಟಿದ್ದು ತನಗೆ ; ಬಚ್ಚಿಟ್ಟಿದ್ದು ಪರರಿಗೆ

IX) **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ** 6 x 3 = 18

33) "ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು"

34) "ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮವಲ್ಲ"

35) "ಈ ವೃದ್ಧಂ ಕಿಱುಕುಳನಲ್ಲ"

36) "ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ ವೀರಧ್ವನಿಯೇರಬೇಕು"

37) "ದಿವ್ಯ ಜಗದ ಭವ್ಯ ಮನುಜರಾಗಿ ನೀವು ಬಾಳಿರೊ"

38) "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್"

X) **ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ** 1 x 4 = 4

39) ದಟ್ಟ ಕಾಡಿನ ....................

.............................................

.............................................

.......................... ಜೋಡಿ ।

**ಅಥವಾ**

ಹಗಲಿರುಳು ..................

.............................................

.............................................

............................ ಒಂದು ।

XI) **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ** 1 x 4 = 4

40) ಬಡತನದ ಹೊತ್ತಾನೆ ದೊರಕಿ ಫಲವೇನು ನೀ
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ
ಯಡಸಿ ಕೆಡೆದಿಹ ಹೊತ್ತು ರಂಭೆ ದೊರೆಕೊಂಡಲ್ಲಿ
ಫಲವೇನು ಸಾವ ಹೊತ್ತು
ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು
ಹೊಡೆದು ಬೆಂಡಾಗಿ ಬೀಳ್ವೆಮಗೆ ನೀನೊಲಿದು ಮಣಿ
ದೊಡಿಗೆಗಳನಿತ್ತು ಫಲವೇನು ಭೂಪಾಲ ಹೇಳೆನುತ
ಮತ್ತಿಂತೆಂದರು ॥

XII) **ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 2 x 4 = 8

41) ರಾಧಾಕೃಷ್ಣನ್ ಅವರು ಅಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ವಿವರಿಸಿ.

ಅಥವಾ

ಹಿಂದೂ ಧರ್ಮ ಮತ್ತು ತತ್ವಶಾಸ್ತ್ರದ ಬಗ್ಗೆ ರಾಧಾಕೃಷ್ಣನ್ ಅವರ ಅಭಿಪ್ರಾಯವೇನು ?

42) 'ಗುರು ಕರುಣೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

'ಬಿದುರು' ಮನುಷ್ಯನಿಗೆ ಹೇಗೆ ಸಹಾಯಕವಾಗಿದೆ ?

XIII) **ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ** 2 + 2 = 4

ಮಹಾತ್ಮ ಬಸವಣ್ಣನವರು ಕಟ್ಟಬಯಸಿದ್ದು ಸರ್ವಶೋಷಣೆಗಳಿಂದಲೂ ಮುಕ್ತವಾದ ಸ್ವಾತಂತ್ರ್ಯ, ಸಮಾನತೆ, ಸೌಹಾರ್ದಗಳ ಅಡಿಗಲ್ಲಿನ ಮೇಲೆ ನಿಂತ, ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು. ಅವರು ಕಲ್ಪಿಸಿಕೊಂಡು ಕಟ್ಟಬಯಸಿದ ನೂತನ ಸಮಾಜದ ಒಂದು ಮುಖ್ಯಾಧಾರವೆಂದರೆ "ಕಾಯಕ ತತ್ವ". ಕಾಯಕಕ್ಕೆ ಬಸವಣ್ಣನವರಿತ್ತ ಪ್ರಾಧಾನ್ಯ ಅತ್ಯಂತ ಗಮನಾರ್ಹವಾದುದು. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಏನಾದರೊಂದು ದೈಹಿಕವಾದ ಕೆಲಸ ಮಾಡಬೇಕು. ಅದರಿಂದಲೇ ಜೀವನ ನಡೆಸಬೇಕು ಎಂಬುದು ಈ ಕಾಯಕ ತತ್ವದ ಒಂದು ಮುಖವಾದರೆ, ಯಾವ ಕೆಲಸವೂ ಕೀಳಲ್ಲ ಪ್ರತಿಯೊಂದು ಕೆಲಸವೂ ಪವಿತ್ರ ಎನ್ನುವುದು ಇನ್ನೊಂದು ಮುಖ. ಅನೇಕ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ರಾಮಬಾಣವಾಗಬಲ್ಲುದು ಈ ಕಾಯಕ ತತ್ವ. ಸಮಾಜದ ಅಸಮತೆ, ದಾರಿದ್ರ್ಯಗಳನ್ನು ನಿವಾರಿಸುವ ಏಕೈಕ ಮಂತ್ರವಾಗಿದೆ. ಬಸವಣ್ಣನವರು ಸಂಸಾರದಲ್ಲಿ ಇದ್ದುಕೊಂಡೇ ಪರಮಾರ್ಥವನ್ನು ಸಾಧಿಸುವ ಕಲೆಯನ್ನು ಅವರು ಉಪದೇಶಿಸಿದ್ದಾರೆ. ಅಂತರಂಗ – ಬಹಿರಂಗಗಳ ಸಾಮರಸ್ಯವನ್ನು ಅವರು ವಿಶೇಷವಾಗಿ ಒತ್ತಿ ಹೇಳಿದ್ದಾರೆ. 'ಒಳ್ಳೆಯ ಆಲೋಚನೆ, ಆಲೋಚನೆಗೆ ತಕ್ಕ ನುಡಿ, ನುಡಿಗೆ ತಕ್ಕ ನಡೆ' ಇವುಗಳನ್ನು ಬೋಧಿಸಿದ್ದಾರೆ. 'ನುಡಿಗೆ ತಕ್ಕ ನಡೆಯ ಕಂಡರೆ ಕೂಡಲಸಂಗಮದೇವ ತನ್ನೊಳಗಿರ್ಪನಯ್ಯ' ಎಂಬುದು ಅವರ ಆಶ್ವಾಸನೆ. ಅಂತರಂಗದ ಅರಿವು, ಬಹಿರಂಗದ ಕ್ರಿಯೆ ಎರಡಕ್ಕೂ ಅವರು ಸಮಾನ ಪುರಸ್ಕಾರ ನೀಡಿದ್ದಾರೆ.

**ಪ್ರಶ್ನೆಗಳು :–**

43. ಅ) ಕಾಯಕತತ್ತ್ವದ ಎರಡು ಮುಖಗಳಾವುವು?

ಬ) ಅಂತರಂಗ–ಬಹಿರಂಗಗಳ ಸಾಮರಸ್ಯದ ಕುರಿತು ಬಸವಣ್ಣನವರ ಬೋಧನೆಗಳೇನು ?

XIV) **ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಯಾವುದಾದರೂ ಒಂದಕ್ಕೆ ಪತ್ರವನ್ನು ಬರೆಯಿರಿ** 1 x 5 = 5

44) ನೀವು ಹುಕ್ಕೇರಿ ಸರಕಾರಿ ಪ್ರೌಢ ಶಾಲೆಯ ಮೋಹನ / ಮಣಿ ಎಂದು ಭಾವಿಸಿಕೊಂಡು ಬೇರೆ ಊರಿನಲ್ಲಿರುವ ನಿಮ್ಮ ತಾಯಿಗೆ ನಿಮ್ಮ ಅಭ್ಯಾಸದ ಪ್ರಗತಿಯನ್ನು ಕುರಿತು ಪತ್ರ ಬರೆಯಿರಿ.

ಅಥವಾ

ಎಸ್. ಕೆ. ಪ್ರೌಢ ಶಾಲೆ ಕಾಕತಿಯ ಸ್ನೇಹಾ / ಸಂಕೇತ ಎಂದು ತಿಳಿದು ನಿಮ್ಮ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳಿಗೆ ನಿಮ್ಮ ಓಣಿಯ ಒಳಚರಂಡಿ ವ್ಯವಸ್ಥೆ ಸರಿಪಡಿಸುವಂತೆ ಕೋರಿ ಮನವಿ ಪತ್ರ ಬರೆಯಿರಿ.

XV) **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ನಿಬಂಧ ಬರೆಯಿರಿ** 1 x 5 = 5

45) ಅತೀವೃಷ್ಟಿ ಮತ್ತು ಪರಿಹಾರೋಪಾಯಗಳು

ಅಥವಾ

ಕಂಪ್ಯೂಟರ್ ಶಿಕ್ಷಣ

<><><><><>

## 9 ನೆಯ ತರಗತಿಯ ಮಾದರಿ ಪ್ರಶ್ನೆ ಪತ್ರಿಕೆ : 2019-20

ವಿಷಯ : **ಪ್ರಥಮ ಭಾಷೆ – ಕನ್ನಡ** (01-K) **3**

ಸಮಯ : 3-00 ಗಂಟೆ, ಅಂಕಗಳು : 100

---

**ಸೂಚನೆಗಳು : * ಪ್ರಶ್ನೆ ಪತ್ರಿಕೆಯು 45 ಪ್ರಶ್ನೆಗಳನ್ನು ಒಳಗೊಂಡಿದೆ. * ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. * ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.**

I) **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ.** 6 x 1 = 6

1) ಝ, ಮ, ಙ, ಳ – ಇವುಗಳಲ್ಲಿ ಅವರ್ಗೀಯ ವ್ಯಂಜನಾಕ್ಷರ

ಅ) ಮ ಬ) ಙ

ಕ) ಳ ಡ) ಝ

2) ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ :

ಅ) ಉದ್ಧರಣ ಬ) ಆವರಣ

ಕ) ಅಲ್ಪವಿರಾಮ ಡ) ವಾಕ್ಯವೇಷ್ಠನ

3) ಇದು ಮೂರನೆಯ ಪದ (ಅನ್ಯಪದ) ದ ಅರ್ಥ ಪ್ರಧಾನವಾದ ಸಮಾಸವಾಗಿದೆ.

ಅ) ಅಂಶಿ ಬ) ಬಹುವ್ರೀಹಿ

ಕ) ಗಮಕ ಡ) ದ್ವಿಗು

4) ಮಗುವಿಗಾಗಿ ತಾಯಿ ದಿನದಿನವೂ ಲಾಲಿಹಾಡು ಹಾಡುತ್ತಿದ್ದಳು. ಈ ವಾಕ್ಯದಲ್ಲಿರುವ ದ್ವಿರುಕ್ತಿ ಪದ:

ಅ) ಹಾಡುತ್ತಿದ್ದಳು ಬ) ಮಗುವಿಗಾಗಿ

ಕ) ದಿನದಿನವೂ ಡ) ಲಾಲಿಹಾಡು

5) 'ಮತ್ತು' – ಎಂಬುದು ಈ ವ್ಯಾಕರಣಾಂಶವಾಗಿದೆ.

ಅ) ಸಾಮಾನ್ಯಾವ್ಯಯ ಬ) ಅನುಕರಣಾವ್ಯಯ

ಕ) ಕ್ರಿಯಾರ್ಥಕಾವ್ಯಯ ಡ) ಸಂಬಂಧಾರ್ಥಕಾವ್ಯಯ

6) ಹಳಗನ್ನಡದ ಸಪ್ತಮಿ ವಿಭಕ್ತಿ ಪ್ರತ್ಯಯ :

ಅ) ಅಮ್ ಬ) ಒಳ್

ಕ) ಅತ್ತಣಿಂ ಡ) ಅ

II) **ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.** 4 x 1 = 4

7) ಪ್ರಾಣ : ಹರಣ ::
ವ್ಯಾಘ್ರ : ___________

8) ದ್ರವ್ಯಾರ್ಥಿ : ಸವರ್ಣದೀರ್ಘ ಸಂಧಿ ::
ವಾಗ್ದೇವಿ : ___________

9) ಲಂಚಗುಳಿ : ತದ್ಧಿತಾಂತನಾಮ ::
ಹಿರಿಮೆ : ___________

10) ಸಾಬೂನು : ಪೋರ್ಚುಗೀಸ್ ::
ತಾರೀಖು : ___________

III) **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** 7 x 1 = 7

11) ಶಿವರಾಮ ಕಾರಂತರು ಜಯಪುರದಲ್ಲಿ ಯಾವ ಇಂಜನಿಯರ್‌ರ ಮನೆಗೆ ಹೋದರು ?

12) ಶ್ರೀವೈಷ್ಣವರೊಡನೆ ಮಹಾರಾಜನು ಏನು ಹೇಳಿದನು?

13) ವೀರಭದ್ರ ಕುಣಿತಕ್ಕೆ ಇರುವ ಹೆಸರುಗಳನ್ನು ಬರೆಯಿರಿ.

14) ರುದ್ರಕನ್ನಿಕೆಯರ ಹೆಸರುಗಳನ್ನು ಬರೆಯಿರಿ.

15) ತುಂಬಿದ ಸಭೆಯ ಜನ ಯಾರಿಗೆ ಕಾತುರರಾಗಿದ್ದರು ?

16) ಸತ್ತಿಗೆಯು ಯಾವಾಗ ದೈವ ಸ್ವರೂಪ ಆಗಿರುತ್ತದೆ ?

17) ಬಸವಕೇಂದ್ರದವರು ನಾಗರ ಪಂಚಮಿಯ ದಿನ ಮೈಕಿನಲ್ಲಿ ಏನೆಂದು ಹೇಳಿ ಜಾಗೃತಿ ಮೂಡಿಸುತ್ತಿದ್ದರು ?

IV) **ಕೆಳಗಿನ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 10 x 2 = 20

18) ಮೌಲ್ವಿಯ ವಿದ್ಯಾಭ್ಯಾಸ ಹೇಗಾಯಿತು ?

19) ಹುಸೇನ್ ಕೃಷ್ಣನ ಅಭಿನಯದ ಬಗ್ಗೆ ತಿಳಿಸಿ.

20) ವೀರಗಾಸೆ ಕುಣಿತದ ವೇಷಭೂಷಣಗಳು ಹೇಗಿರುತ್ತವೆ?

21) ವೃದ್ಧ ಮಾಹೇಶ್ವರನು ಶಿವಮಂತ್ರವನ್ನು ಹೇಗೆ ಹೇಳುತ್ತಿದ್ದನು?

22) ಬುದ್ಧನೆಂದರೆ ಏನೇನು ಎಂದು ಕವಿಗಳು ಹೇಳಿದ್ದಾರೆ ?

23) ಬುದ್ಧನು ಬೋಧಿಸಿದ ಪಂಚಶೀಲತತ್ತ್ವಗಳು ಯಾವುವು?

24) ಪಂಢರಿಬಾಯಿಯವರ ಬಾಲ್ಯವನ್ನು ಬರೆಯಿರಿ.

25) ನನ್ನಾಸೆ ಕವನದಲ್ಲಿ ಕವಯಿತ್ರಿಯವರ ಆಸೆಗಳೇನು ?

26) ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳು ಯಾವುವು ?

27) "ಪುಟ್ಟ ಹಕ್ಕಿ" ಪದ್ಯದ ಭಾವಾರ್ಥವನ್ನು ಸಂಕ್ಷಿಪ್ತವಾಗಿ ಬರೆ

V) **ಕೆಳಗಿನ ಸಾಹಿತಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ ಬಿರುದುಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ** 2 x 3 = 6

28) ಶಿವರಾಮ ಕಾರಂತ

29) ರಾಘವಾಂಕ

VI) **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ** 1 x 3 = 3

30) ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನೊತ್ತಿ
ಗಂಟಲಂ

VII) **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ** 1 x 3 = 3

31) ಶಾಲೆಗೆ ಈ ವಿದ್ಯಾರ್ಥಿಯೊಂದು ರತ್ನ

VIII) **ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಅದರ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ** 1 x 3 = 3

32) ಹಿತ್ತಲ ಗಿಡ ಮದ್ದಲ್ಲ

**– ಅಥವಾ –**

ದೂರದ ಬೆಟ್ಟ ನುಣ್ಣಗೆ

IX) **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ** 6 x 3 = 18

33) "ಈ ಮಾಡಿದ ಕಟ್ಟಳೆಯನು ಆವನೊಬ್ಬನು ಮೀಱಿದವನು ರಾಜದ್ರೋಹಿಯಪ್ಪನು"

34) "ಏನ್ರಪ್ಪಾ . . . ದೈವದವರು ಏನು ಹೇಳ್ತೀರಾ ಹೇಳ್ರಿ"

35) "ನನ್ನ ಹಲಾಯುಧದಿಂದ ಭೀಮನೆದೆಯನ್ನು ಉತ್ತು ಬರುತ್ತೇನೆ"

36) "ಉನ್ನತೋನ್ನತ ಘನ ಹಿಮಾದ್ರಿ ಶಿಖರವನೇರಿ ಹಾಡಲ್ಲ ಹಾಡಬೇಕು"

37) "ಚಂದಿರನೋ ಭಾಸ್ಕರನೋಯೆಂಬಂತೆ"

38) "ನಿತ್ಯಕಾಲದಲ್ಲಿ ಅಶನವ ಉಂಡು ಹೊತ್ತು ಗಳೆಯಲಿಬೇಡ"

X) **ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ** 1 x 4 = 4

39) ಮಾರಿ ................................
..............................................
..............................................
.......................... ಬನದೊಳ್ ।
ನಿಯತಿಯನಾರ್ .................
..............................................
..............................................
............................ ಕೋಡೆರಡೊಳವೇ ।

**ಅಥವಾ**

XI) **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ** 1 x 4 = 4

40) ಕಂಡು ಪಾರಿವಾಳಗಳ ಪಾಡು ತಾಯಿ ಧುಮುಕಿತು ಬಲೆಗೆ
ಹೆಂಡತಿಯನಗಲಿರದ ಗಂಡು ಹಕ್ಕಿ
ಒಳಗೆ ಬಂದಿತು ಬಳಗೆ ಚಿಕ್ಕಿ ಚಿಕ್ಕಿ ॥

XII) **ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 2 x 4 = 8

41) ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ವಿವರಿಸಿ.

ಅಥವಾ

ಹಿಂದೂ ಧರ್ಮ ಮತ್ತು ತತ್ತ್ವಶಾಸ್ತ್ರದ ಬಗ್ಗೆ ರಾಧಾಕೃಷ್ಣನ್ ಅವರ ಅಭಿಪ್ರಾಯವೇನು ? ವಿವರಿಸಿ

42) ಕನ್ನಡ ನಾಡಿನ ವಿಸ್ತಾರ, ಪ್ರಾಕೃತಿಕ ಸಂಪತ್ತಿನ ಬಗ್ಗೆ ಕವಿಗಳು ಹೇಗೆ ವರ್ಣಿಸಿದ್ದಾರೆ ?

ಅಥವಾ

ಕನ್ನಡ ಭಾಷೆ ಹಾಗೂ ಸಾಹಿತ್ಯದ ಬಗ್ಗೆ ಕವಿಗಳಿಗಿರುವ ಅಭಿಮಾನ ಹೇಗೆ ವ್ಯಕ್ತವಾಗಿದೆ ?

XIII) **ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ** 2 + 2 = 4

43) ಭಾರತವು ವಿವಿಧ ಧರ್ಮ, ಭಾಷೆ, ಬುಡಕಟ್ಟು, ಜನಾಂಗಗಳನ್ನು ಹೊಂದಿದ್ದು, ದೇಶದ ಯಾವುದೇ ಮೂಲೆಗೆ ಹೋದರೂ ಅಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಏಕೆಂದರೆ ಭಾರತೀಯ ನಾಗರಿಕತೆಯು ಯಾವಾಗಲೂ ಧಾರ್ಮಿಕ ಹಾಗೂ ನೈತಿಕ ತಳಹದಿಯ ಮೇಲೆ ಚಲಿಸುತ್ತಿದೆ. ದೇಶದ ಎಲ್ಲ ಭಾಗಗಳಲ್ಲಿಯೂ, ಸಾಂಸ್ಕೃತಿಕ ಮತ್ತು ಜೀವನ ಮಾರ್ಗದ ಒಗ್ಗಟ್ಟು ಹಾಗೂ ದೃಷ್ಟಿಕೋನವು ಧರ್ಮ, ನಂಬಿಕೆ ಮತ್ತು ಆಚರಣೆಗಳಲ್ಲಿ ವಿಶಾಲ ವೈವಿಧ್ಯತೆಯನ್ನು ಹೊಂದಿದ್ದರೂ ನಮ್ಮಲ್ಲಿ ನಾವು ಭಾರತೀಯರು ಎಂಬ ಏಕತಾಭಾವ ಬಲವಾಗಿ ಬೇರೂರಿದೆ. ನಮ್ಮ ದೇಶದ ರಾಷ್ಟ್ರಗೀತೆ, ರಾಷ್ಟ್ರಭಾಷೆ, ರಾಷ್ಟ್ರಮುದ್ರೆ ಇವು ನಮ್ಮ ಏಕತೆಯ ಸಂಕೇತಗಳಾಗಿವೆ. ಅಲ್ಲದೇ ವಂದೇಮಾತರಂ, ಸಾರೇ ಜಂಹಾಸೇ ಅಚ್ಛಾ, ಜನಗಣಮನ ಇಂತಹ ದೇಶ ಭಕ್ತಿಗೀತೆಗಳು ನಮ್ಮಲ್ಲಿ ದೇಶಪ್ರೇಮ, ದೇಶಾಭಿಮಾನವನ್ನು ಹುಟ್ಟಿಸುತ್ತವೆ. ಇಡೀ ದೇಶವೇ ವೈವಿಧ್ಯಮಯದ ಸಾಂಸ್ಕೃತಿಕ ಆಚರಣೆಯಲ್ಲಿರುವಾಗ ನಾವು ಒಂದೇ ಮನೆಯವರಂತೆ ಕೂಡಿ ಬಾಳುತ್ತಿರುವುದು ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ಹೇಳಬಹುದು. ಇತ್ತೀಚಿಗೆ ಭಾರತೀಯ ಸಂಸ್ಕೃತಿಯು ಪ್ರಗತಿ ಹಾಗೂ ಬದಲಾವಣೆಯ ಹಂತದಲ್ಲಿದೆ. ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಯ ಗಾಳಿಯು ಇಡೀ ವಿಶ್ವವನ್ನೇ ನಡುಗಿಸುತ್ತಿದೆ. ಆದರೆ ಭಾರತೀಯರಾದ ನಾವು ಮಾತ್ರ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಪ್ರೀತಿ ಹಾಗೂ ಸೌಹಾರ್ದತೆಯಿಂದ ನಡೆದುಕೊಳ್ಳುತ್ತಾ, ನಮ್ಮ ದೇಶದ ಏಕತೆಯನ್ನು ಎತ್ತಿ ಹಿಡಿದಿದ್ದೇವೆ.

ಅ) ಭಾರತವು ಹೇಗೆ ವೈವಿಧ್ಯಮಯವಾಗಿದೆ ?
ಬ) ನಾವು ನಮ್ಮ ದೇಶದ ಏಕತೆಯನ್ನು ಹೇಗೆ ಎತ್ತಿ ಹಿಡಿದಿದ್ದೇವೆ ?

XIV) **ಕೆಳಗಿನ ಯಾವುದಾದರೂ ಒಂದಕ್ಕೆ ಮಾಹಿತಿಯನ್ನಾಧರಿಸಿ, ಪತ್ರ ಬರೆಯಿರಿ.** 1 * 5 = 5

44) ನಿಮ್ಮನ್ನು ಹುಕ್ಕೇರಿಯ ಬಸವೇಶ್ವರ ಪ್ರೌಢಶಾಲೆಯ ೯ ನೆಯ ತರಗತಿ ವಿದ್ಯಾರ್ಥಿ ಶ್ರೇಯಸ್/ ಯಶಸ್ವಿ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ವಿಜಯವಾಣಿ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರವನ್ನು ಬರೆಯಿರಿ.

**: ಅಥವಾ :**

ನಿಮ್ಮನ್ನು ಹುಕ್ಕೇರಿ ಸರ್ಕಾರಿ ಪ್ರೌಢ ಶಾಲೆಯ ಪ್ರಿಯಂಕಾ / ಶ್ಲೋಕ್ ಎಂದು ಭಾವಿಸಿಕೊಂಡು, ಬೆಳಗಾವಿಯ ಗೋಕುಲ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ನಿಮ್ಮ ಸಹೋದರಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ವಿವರಿಸಿ ಪತ್ರ ಬರೆಯಿರಿ.

XV) **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ನಿಬಂಧ ಬರೆಯಿರಿ** 1 x 5 = 5

45) * ಜನಸಂಖ್ಯೆ

**: ಅಥವಾ :**

* ನಿರುದ್ಯೋಗ

<><><><><>

**9 ನೆಯ ತರಗತಿಯ ಮಾದರಿ ಪ್ರಶ್ನೆ ಪತ್ರಿಕೆ : 2019-20**

ವಿಷಯ : **ಪ್ರಥಮ ಭಾಷೆ – ಕನ್ನಡ** (01-K) **4**

ಸಮಯ : 3-00 ಗಂಟೆ, ಅಂಕಗಳು : 100

---

**ಸೂಚನೆಗಳು : * ಪ್ರಶ್ನೆ ಪತ್ರಿಕೆಯು 45 ಪ್ರಶ್ನೆಗಳನ್ನು ಒಳಗೊಂಡಿದೆ. * ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. * ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.**

I) **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ.** 6 x 1 = 6

1) ಕನ್ನಡ ವರ್ಣಮಾಲೆಯಲ್ಲಿ ಸಂಧ್ಯಕ್ಷರಗಳೆಂದು ಗುರುತಿಸಲ್ಪಡುವ ಅಕ್ಷರಗಳಿವು
   - ಎ) ಏ, ಐ ಬಿ) ಒ, ಓ
   - ಸಿ) ಅಂ, ಅಃ ಡಿ) ಐ, ಔ

2) ಅಂಕಿತ ನಾಮಪದಕ್ಕೆ ಉದಾಹರಣೆ
   - ಎ) ವಸಂತ ಬಿ) ಕುರುಡ
   - ಸಿ) ಕುಂಟ ಡಿ) ವಿಜ್ಞಾನಿ

3) ಆದೇಶಸಂಧಿಗೆ ಇದು ಉದಾಹರಣೆಯಾಗಿದೆ
   - ಎ) ತೆರೆದಿಕ್ಕುವ ಬಿ) ಹೊಸಗಾಲ
   - ಸಿ) ಇರುಳಳಿದು ಡಿ) ಗಿರೀಶ

4) ಈ ಪದವು ಕೃದಂತ ಭಾವನಾಮಕ್ಕೆ ಉದಾಹರಣೆ
   - ಎ) ನಡೆಯಲು ಬಿ) ನಡವಳಿಕೆ
   - ಸಿ) ನಡೆಯುವ ಡಿ) ಚಲುವಿಕೆ

5) ಪಂಚಮೀ ವಿಭಕ್ತಿ ಪ್ರತ್ಯಯ ಕಾರಕಾರ್ಥ
   - ಎ) ಸಂಬಂಧ ಬಿ) ಅಪಾದಾನ
   - ಸಿ) ಸಂಪ್ರದಾನ ಡಿ) ಅಧಿಕರಣ

6) ಪ್ರಾಸಾಕ್ಷರದ ಹಿಂದಿನ ಸ್ವರವು ಹ್ರಸ್ವವಾಗಿದ್ದರೆ ಅದು
   - ಎ) ಸಿಂಹಪ್ರಾಸ ಬಿ) ಗಜಪ್ರಾಸ
   - ಸಿ) ವೃಷಭಪ್ರಾಸ ಡಿ) ಶರಭಪ್ರಾಸ

II) **ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದಂತೆ ಪದವನ್ನು ಬರೆಯಿರಿ** 4 x 1 = 4

7) ಗುರು ಮೂರಿರೆ : 'ಮ' ಗಣ : : ಲಘು ನಡುವಿರೆ : ................

8) ವಿಜ್ಞಾನ : ಬಿನ್ನಾಣ : : ವಿಜ್ಞಾಪನೆ : ................

9) ದಿವಾನ : ಪರ್ಷಿಯನ್ : : ಬಂದೂಕು : ................

10) ಕಂದ ಪದ್ಯ : 64 ಮಾತ್ರೆಗಳು : : ಭಾಮಿನಿ ಷಟ್ಪದಿ : ................

III) **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** 7 x 1 = 7

11) ಕನ್ನಡ ಮೌಳ್ವಿಯ ವೃತ್ತಿ ಯಾವುದು ?

12) ಲೇಖಕರಿಗಿದ್ದ ಹಂಬಲವೇನು ?

13) 'ತಲಕಾಡುಗೊಂಡ' ಎಂದರೆ ಯಾರು ?

14) ದುರ್ಯೋಧನನ ತಾಯಿ ಯಾರು ?

15) ಮಹಾಮನೆಯಲ್ಲಿ ಯಾವ ಮಂತ್ರವನ್ನು ಸಾರಬೇಕು?

16) ತುಪ್ಪದೊಡನೆ ಯಾವುದನ್ನು ಬೆರೆಸಬಾರದು ?

17) ತಿಪ್ಪಣ್ಣನ ತಂಗಿಯ ಹೆಸರೇನು ?

IV) **ಕೆಳಗಿನ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 10 x 2 = 20

18) ಮೀರಾಬಾಯಿ ದೇವಾಲಯದ ಸೌಂದರ್ಯವನ್ನು ವಿವರಿಸಿ.

19) ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು ?

20) ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಕೊಂಡ ಕ್ರಮಗಳು ಯಾವುವು ?

21) ಅಶ್ವತ್ಥಾಮನ ಧನುಷ್ಟಾಂಕಾರ ಕೇಳಿದ ಬಲರಾಮನು ನುಡಿದ ನುಡಿಗಳೇನು ?

22) ಚಂಡಕರ್ಮನು ಎಂತಹ ಬಲಿಯನ್ನು ಹುಡುಕಿ ಹೊರಟನು ?

23) ಮೋಕ್ಷಗಾಮೀ ಜೀವನಿಗೆ ಒದಗುವ ಯಾವುದಾದರೂ ನಾಲ್ಕು ಕ್ಲೇಶಗಳನ್ನು ಬರೆಯಿರಿ ?

24) ರಂಗರಾವ್ ಅವರು ಮಗಳ ಹೆಸರನ್ನು ಪಂಢರಿಬಾಯಿ ಎಂದು ಬದಲಾಯಿಸಲು ಕಾರಣವೇನು ?

25) ಬಸವಕೇಂದ್ರದವರು ನಾಗರ ಪಂಚಮಿಯ ದಿನ ಏನೆಂದು ಜಾಗೃತಿ ಮೂಡಿಸುತ್ತಿದ್ದರು ?

26) ಸದಾ ಚಿಮ್ಮುವ ಚಿಲುಮೆಯಾಗಬೇಕು ಏಕೆ ?

27) ಪುಟ್ಟಹಕ್ಕಿಯ ಭಯಗಳೇನು ?

V) **ಕೆಳಗಿನ ಸಾಹಿತಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ ಬಿರುದುಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ** 2 x 3 = 6

28) ಹರಿಹರ

29) ಶ್ರೀವಿಜಯ

VI) **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ** 1 x 3 = 3

30) ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ

VII) **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ** 1 x 3 = 3

31) ಬಾನಿನಲ್ಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು

VIII) **ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಅದರ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ** 1 x 3 = 3

32) ದೇಶ ಸುತ್ತಿ ನೋಡು ; ಕೋಶ ಓದಿ ನೋಡು

**– ಅಥವಾ –**

ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ?

IX) **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ** 6 x 3 = 18

33) ನನ್ನ ಸಮಾನ ಪಾಠ ಮಾಡುವವರು ಯಾರೂ ಇಲ್ಲ

34) ಶಿಕ್ಷಣವು ಜೀವನದ ಅವಿಭಾಜ್ಯ ಅಂಗ

35) ಕೇತಮಲ್ಲಪ್ಪನ ಹೆಸರಿನಲ್ಲೇ ಕಟ್ಟೋಣವಾಗಲಿ

36) ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ

37) ಬಾರಯ್ಯ ಬಾರೊ ಬೆಳಕಿನ ಆದಿಗೆ

38) ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು

**X) ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ** 1 x 4 = 4

39) ಮಾತಿನೊಳಗ ......................
..............................................
..............................................
.......................... ಕೆಡಲಿಬೇಡ ।
ಬೀಸುವ ................................
..............................................
..............................................
............................ ಬೆತ್ತವಾದೆ ।

**ಅಥವಾ**

**XI) ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ** 1 x 4 = 4

40) ಅಂಬುಜವೆಲ್ಲವು ರವಿಯ ನೋಳ್ಪಂತೆ ನೀ
ಲಾಂಬುಜ ನೋಳ್ಪಂತೆ ಶಶಿಯಾ
ತುಂಬಿದ ಸಭೆಯೆಲ್ಲ ನೃಪನ ನೋಡುವ ಮಿಕ್ಕ
ಹಂಬಲ ಮರೆದುದಲ್ಲಲ್ಲಿ

**XII) ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 2 x 4 = 8

41) ಡೊಳ್ಳು ಬಾರಿಸುವ ಕಲಾವಿದರ ವೇಷಭೂಷಣಗಳು ಹೇಗಿರುತ್ತವೆ ?

**: ಅಥವಾ :**

ಯಕ್ಷಗಾನದ ವೈಶಿಷ್ಟ್ಯ ಹಾಗೂ ಪೂರ್ವರಂಗದ ಉದ್ದೇಶವೇನು ?

42) ಕಯ್ಯಾರ ಕಿಞ್ಞಣ್ಣ ರೈ ಅವರ ಪ್ರಕಾರ ಹೊಸಹಾಡು ಹೇಗಿರಬೇಕು ?

**: ಅಥವಾ :**

'ಹೊಸಹಾಡು' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**XIII) ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ** 2 + 2 = 4

43) ವಿದುರನೀತಿಯು ಮಹಾಭಾರತದ ಅತ್ಯಂತ ಉದ್ಬೋಧಕವಾದ ಒಂದು ಪ್ರಸಂಗ. ಇದರಲ್ಲಿ ವಿದುರನು ಧೃತರಾಷ್ಟ್ರನನ್ನು ಉದ್ದೇಶಿಸಿ ಇಹ-ಪರಗಳೆರಡಕ್ಕೂ ಕಲ್ಯಾಣವನ್ನುಂಟು ಮಾಡಬಲ್ಲ ಅನೇಕ ಸಂಗತಿಗಳ ಬಗ್ಗೆ ತಿಳಿಸಿಕೊಡುತ್ತಾನೆ. ಮಹಾಭಾರತದ ಉದ್ಯೋಗ ಪರ್ವದಲ್ಲಿರುವ ವಿದುರ ನೀತಿಯಲ್ಲಿ ವ್ಯವಹಾರ, ಮಾತು, ನೀತಿ, ಸದಾಚಾರ, ಧರ್ಮ, ಸುಖ-ದುಃಖಗಳು ಪ್ರಾಪ್ತವಾಗುವ ಬಗೆಯನ್ನು ತಿಳಿಸಲಾಗಿದೆ. ಅಲ್ಲದೆ ಕರ್ಮದ ನಿರ್ಣಯ, ತ್ಯಾಗದ ಮಹಿಮೆ, ನ್ಯಾಯದ ಸ್ವರೂಪ, ಸತ್ಯದ ಬಗ್ಗೆಯೂ ತಿಳಿಸಲಾಗಿದೆ. ಮುಂದುವರಿದು ಪರೋಪಕಾರ, ಕ್ಷಮೆ, ಅಹಿಂಸೆ, ಮಿತ್ರನ ಲಕ್ಷಣ, ಕೃತಘ್ನನಿಗೆ ಉಂಟಾಗುವ ದುರ್ದೆಸೆ ಮುಂತಾದವುಗಳ ಬಗ್ಗೆ ವರ್ಣನೆಯಿದೆ. ಈ ವರ್ಣನೆಯೊಂದಿಗೆ ರಾಜಧರ್ಮದ ಸುಂದರವಾದ ನಿರೂಪಣೆಯನ್ನು ಕೊಡಲಾಗಿದೆ. ವಿದುರನೀತಿಯ ಒಂದು ಶ್ಲೋಕದ ಅರ್ಥ ಹೀಗಿದೆ "ಮುಪ್ಪು ರೂಪವನ್ನು, ಆಸೆಯು ಧೈರ್ಯವನ್ನು, ಮೃತ್ಯುವು ಪ್ರಾಣವನ್ನು, ಅಸೂಯೆಯು ಧರ್ಮಾಚರಣೆಯನ್ನು, ಕಾಮವು ಲಜ್ಜೆಯನ್ನು, ನೀಚ ಮನುಷ್ಯರ ಸೇವೆಯು ಚಾರಿತ್ರ್ಯವನ್ನು, ಕೋಪವು ಸಂಪತ್ತನ್ನು ವಿನಾಶಗೊಳಿಸುತ್ತದೆ. ದುರಭಿಮಾನ ಅಥವಾ ದುರಹಂಕಾರವು ಮಾನವನ ಸರ್ವಸ್ವವನ್ನೂ ವಿನಾಶಗೊಳಿಸುತ್ತದೆ". ಶುದ್ಧ ಹಾಗೂ ಸುಖಮಯ ಜೀವನವನ್ನು ನಡೆಸಲು ಬಯಸುವ ವಿದ್ವಾಂಸ, ತರುಣ, ವೃದ್ಧ, ಬಾಲಕ, ಮಹಿಳೆ, ಶಾಸಕ, ಪ್ರಜೆ, ಧನಿಕ, ದರಿದ್ರ, ವಿದ್ಯಾರ್ಥಿ, ಶಿಕ್ಷಕ, ಸೇವಾವ್ರತಿ ಎಲ್ಲರಿಗೂ ವಿದುರನೀತಿಯ ಶ್ಲೋಕಗಳು ಅತ್ಯಂತ ಪ್ರಯೋಜನಕಾರಿಯಾಗಿವೆ.

**ಪ್ರಶ್ನೆಗಳು :**

ಅ) ವಿದುರನೀತಿಯಲ್ಲಿ ಯಾವ ಯಾವ ವಿಷಯಗಳ ಬಗ್ಗೆ ನಿರೂಪಿಸಲಾಗಿದೆ ?

ಆ) ವಿದುರನೀತಿಯ ಶ್ಲೋಕದಲ್ಲಿ ತಿಳಿಸಿರುವಂತೆ ವಿನಾಶಕ್ಕೆ ಕಾರಣವಾಗುವ ಅಂಶಗಳಾವುವು ?

**XIV) ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಯಾವುದಾದರೂ ಒಂದಕ್ಕೆ ಪತ್ರವನ್ನು ಬರೆಯಿರಿ** 1 x 5 = 5

44) ನಿಮ್ಮನ್ನು ಚಿಕ್ಕೋಡಿಯ ಎಸ್. ಎಸ್. ಪ್ರೌಢ ಶಾಲೆಯ 'ಸುನಿತಾ/ ಸಂದೇಶ' ಎಂದು ಭಾವಿಸಿಕೊಂಡು ನೆರೆ ಸಂತ್ರಸ್ತರಿಗೆ ಬೆಳೆ ಪರಿಹಾರ ನೀಡುವಂತೆ ಕೋರಿ ನಿಮ್ಮ ಜಿಲ್ಲಾಧಿಕಾರಿಯವರಿಗೆ ಮನವಿ ಪತ್ರ ಬರೆಯಿರಿ.

**: ಅಥವಾ :**

ನಿಮ್ಮನ್ನು ಬಾಗಲೋಟೆಯ ಸರಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ 'ಚೈತ್ರಾ/ ಚೇತನ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ತಾಯಂದಿರ ಸಭೆಗೆ ಹಾಜರಾಗುವಂತೆ ತಿಳಿಸುತ್ತ ಗೋಕಾಕನ ಬಸವೇಶ್ವರ ಬಡಾವಣೆಯಲ್ಲಿ ವಾಸವಾಗಿರುವ 'ಶಾಂತಮ್ಮ' ಎಂಬ ಹೆಸರಿನ ನಿಮ್ಮ ತಾಯಿಗೆ ಪತ್ರವನ್ನು ಬರೆಯಿರಿ.

**XV) ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ನಿಬಂಧ ಬರೆಯಿರಿ** 1 x 5 = 5

45) ಮಹಿಳಾ ಸಬಲೀಕರಣ

**: ಅಥವಾ :**

ಗ್ರಂಥಾಲಯಗಳ ಮಹತ್ವ

<><><><><>

# 9 ನೆಯ ತರಗತಿಯ ಮಾದರಿ ಪ್ರಶ್ನೆ ಪತ್ರಿಕೆ : 2019-20

ವಿಷಯ : **ಪ್ರಥಮ ಭಾಷೆ - ಕನ್ನಡ** (01-K) **5**

ಸಮಯ : 3-00 ಗಂಟೆ, ಅಂಕಗಳು : 100

---

**ಸೂಚನೆಗಳು : * ಪ್ರಶ್ನೆ ಪತ್ರಿಕೆಯು** 45 **ಪ್ರಶ್ನೆಗಳನ್ನು ಒಳಗೊಂಡಿದೆ. * ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. * ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.**

I) **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ.** 6 x 1 = 6

1) ಮುಂದಲೆ - ಪದದಲ್ಲಿರುವ ಸಮಾಸ
ಎ) ಕರ್ಮಧಾರಯ ಬಿ) ತತ್ಪುರುಷ
ಸಿ) ಅಂಶಿ ಡಿ) ಗಮಕ

2) 'ಬ್ಯಾರೆ' ಪದದ ಗ್ರಾಂಥಿಕ ರೂಪ
ಎ) ಬೇರೆ ಬಿ) ಬೇಟೆ
ಸಿ) ಬರೋಬ್ಬರಿ ಡಿ) ಸರಿ

3) ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯ
ಎ) ಸರಳವಾಕ್ಯ ಬಿ) ಸಾಮಾನ್ಯ ವಾಕ್ಯ
ಸಿ) ಸಂಯೋಜಿತ ವಾಕ್ಯ ಡಿ) ಮಿಶ್ರವಾಕ್ಯ

4) ತದ್ಧಿತಾಂತನಾಮಕ್ಕೆ ಉದಾಹರಣೆ
ಎ) ಸಿರಿತನ ಬಿ) ಚಂದ್ರನಂತೆ
ಸಿ) ನಡೆಯುವ ಡಿ) ಕಪ್ಪು

5) 'ಅತ್ಯಾದರ' ಪದವು ಈ ಸಂಧಿಗೆ ಉದಾಹರಣೆ
ಎ) ವೃದ್ಧಿ ಬಿ) ಗುಣ
ಸಿ) ಯಣ್ ಡಿ) ಅನುನಾಸಿಕ

6) ಗುರು-ಲಘು ಮೊದಲರೆ
ಎ) ಮ-ನ ಗಣ ಬಿ) ಭ-ಯ ಗಣ
ಸಿ) ಜ-ರ ಗಣ ಡಿ) ಸ-ತ ಗಣ

II) **ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದಂತೆ ಪದವನ್ನು ಬರೆಯಿರಿ** 4 x 1 = 4

7) ಉದ್ಯೋಗ : ಉಜ್ಜುಗ : : ತಪಸ್ವಿ : ................
8) ಹುಳುಹುಪ್ಪಡಿ : ಜೋಡುನುಡಿ : : ಅಬ್ಬಬ್ಬಾ : ................
9) ಪೊರ್ಲು : ಚಂದ : : ಐದಿ : ................
10) ಬರೆಯಲಿ : ವಿಧ್ಯರ್ಥಕ : : ಬರೆದಾರು : ................

III) **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** 7 x 1 = 7

11) ಧರ್ಮ ಸಮದೃಷ್ಟಿ ಶಾಸನ ಯಾವಾಗ ನಿರ್ಮಾಣವಾಯಿತು ?
12) ರಾಷ್ಟ್ರಪತಿಗಳಾಗಿ ರಾಧಾಕೃಷ್ಣನ್ ಅವರು ವೇತವನ್ನು ಹೇಗೆ ಸದುಪಯೋಗಪಡಿಸಿಕೊಂಡರು ?
13) ಚೋಳರ ಪ್ರಸಿದ್ಧ ದೊರೆ ಯಾರು ?
14) ನಂಬಿಯಣ್ಣನ ಪೂರ್ವಜನ್ಮದ ಹೆಸರೇನು ?
15) ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು ?
16) ಮುತ್ತುಗದ ಹೂವುಗಳು ಎಲ್ಲಿ ಉದುರಿ ಬಿದ್ದಿದ್ದವು ?
17) ಪಂಢರಿಬಾಯಿ ನಟಿಸಿದ ಮೊದಲ ಚಿತ್ರ ಯಾವುದು ?

IV) **ಕೆಳಗಿನ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 10 x 2 = 20

18) ರಾಮಾನುಜಾಚಾರ್ಯರ ಗುಣವಿಶೇಷತೆ ಬರೆಯಿರಿ ?
19) ದೈವದವರ ತೀರ್ಪಿನ ಬಗೆಗೆ ಶಾಂತಲೆಯ ಅಭಿಪ್ರಾಯವೇನು ?
20) ಯಕ್ಷಗಾನದಲ್ಲಿ ತೆಂಕುತಿಟ್ಟು ಮತ್ತು ಬಡಗುತಿಟ್ಟುಗಳ ವೈಶಿಷ್ಟ್ಯವೇನು ?
21) ಭರಮದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ಹೇಗೆ ನಡೆಯುತ್ತದೆ ?
22) ಕವೀಂದ್ರರ ಶ್ರೇಷ್ಠತೆಯನ್ನು ನೇಮಿಚಂದ್ರನು ಹೇಗೆ ವರ್ಣಿಸಿದ್ದಾನೆ ?
23) ಕನ್ನಡ ನಾಡಿನ ಪ್ರಾಕೃತಿಕ ವರ್ಣನೆಯನ್ನು ಆಂಡಯ್ಯ ಕವಿ ಹೇಗೆ ಸಾರಿದ್ದಾರೆ ?
24) ಇಷ್ತಿಯಾರ್ ಕೂಟದ ವಿಶೇಷತೆ ಏನು ?
25) ಬತ್ತಿ, ಗ್ರಂಥ ಆಗಬೇಕೆಂದು ಕವಯಿತ್ರಿ ಹೇಳಿದ ಪದ್ಯದ ಸಾಲುಗಳು ಯಾವುವು ?
26) ತಿಪ್ಪಣ್ಣನಿಗೆ ದುರ್ಗಪ್ಪನು ಮಾಡಿದ ಆತಿಥ್ಯ ಬರೆಯಿರಿ.
27) ಪುಟ್ಟಹಕ್ಕಿಯ ಭಯಗಳೇನು ?

V) **ಕೆಳಗಿನ ಸಾಹಿತಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ ಬಿರುದುಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ** 2 x 3 = 6

28) ಹರಿಹರ
29) ಕಯ್ಯಾರ ಕಿಞ್ಞಣ್ಣ ರೈ

VI) **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ** 1 x 3 = 3

30) ವರದವರ ಕಾವೇರಿ ನದಿಯಿಂ
ಪರಮೆ ಗೋದಾವರಿಯ ಮಧ್ಯದ
ಹರವು ಕನ್ನಡ ದೇಶವೆಂದನು ಚಕ್ರಿ ನೃಪತುಂಗ

VII) **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ** 1 x 3 = 3

31) ಸೀತೆಯ ಮುಖಕಮಲ ಅರಳಿತು.

VIII) **ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಅದರ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ** 1 x 3 = 3

32) ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು ?

: **ಅಥವಾ** :

ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ

IX) **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ** 6 x 3 = 18

33) "ದೇವರ ದಯೆ ನಾವಿಬ್ಬರೂ ಸೇರಿದೆವು"
34) "ಏರು ಜವ್ವನದ ಯುವಕರಂತೆ ಹಾಸ್ಯ ವಿನೋದಗಳಲ್ಲಿ ತೊಡಗುತ್ತಿದ್ದರು"
35) "ಹೋಗು ಮಗನೇ, ಹಾಗೆಂದು ವೃಕೋದರನನ್ನು ಕೇಳು ಹೋಗು"
36) "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ"
37) "ನಿಯತಿಯನಾರ್ ಮೀಱಿದಪರ್"
38) "ಬುದ್ಧ ನಡೆಯೆಮ್ಮನಡೆ ಬುದ್ಧ ನುಡಿಯೆಮ್ಮನುಡಿ"

X) **ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ** 1 x 4 = 4

39) ಸಂದ ಕಾರಿರುಳು ..................
..............................................
..............................................
....................... ವನೀಶನೆಡೆಗೆ ।

**ಅಥವಾ**

ಬಡತನದ ..................
..............................................
..............................................
................... ಮತ್ತಿಂತೆಂದರು ।

XI) **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ** 1 x 4 = 4

40) ಹಿಂದಿಗೆ ಕಿರಿದು ಕಿಂದಿಗೆ ಹಿರಿದು
ಸರಿಯ ಮಾಡಲಬೇಡ ।
ಗುರು ಮಹಾಂತೇಶನ ಪಾದವ ಹಿಡಿದು
ಇರುವುದು ಬಹುಪಾಡ ॥

XII) **ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 2 x 4 = 8

41) ಜಂತ್ರ-ಮಂತ್ರದ ವಿಶೇಷತೆಯನ್ನು ಬರೆಯಿರಿ

: **ಅಥವಾ** :

ಅಂಬೇರ ಬೆಟ್ಟದ ಮೂರು ಅಂತಸ್ತಿನ ಅರಮನೆಯ ಒಳಾಂಗಣ ಚೆಲುವನ್ನು ತಿಳಿಸಿ.

42) ಸಿರಿಯನಿನ್ನೇನ ಬಣ್ಣಿಪೆನು - ಪದ್ಯದ ಸಾರಾಂಶವನ್ನು ಸಂಕ್ಷಿಪ್ತವಾಗಿ ಬರೆಯಿರಿ

: **ಅಥವಾ** :

ಭರತ ಚಕ್ರವರ್ತಿಯ ರಾಜದರ್ಬಾರಿನ ವೈಭವವನ್ನು ವಿವರಿಸಿ.

XIII) **ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ** 2 + 2 = 4

43) ವಿಶ್ವದ ಬಹುಭಾಷಾ ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ. ಭಾಷೆಗಳನ್ನು ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆ ಎಂದು ವಿಂಗಡಿಸಲಾಗಿದೆ. ವ್ಯಾವಹಾರಿಕ ಎಂದರೆ ಜೀವದ್ಭಾಷೆ. ಇದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಉದಾಹರಣೆ : ಕನ್ನಡ, ತುಳು, ಕೊಂಕಣಿ, ಮರಾಠಿ ಇತ್ಯಾದಿ. ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಬಳಸುವ ಭಾಷೆಯೇ ಗ್ರಾಂಥಿಕ ಭಾಷೆ. ಉದಾಹರಣೆ : ಕನ್ನಡ, ಇಂಗ್ಲೀಷ, ಹಿಂದಿ, ಸಂಸ್ಕೃತ ಇತ್ಯಾದಿ. ಎಲ್ಲಾ ಗ್ರಾಂಥಿಕ ಭಾಷೆಗಳು ವ್ಯವಹಾರಿಕವಾಗಬೇಕಿಲ್ಲ. ಹಾಗೆಯೇ ಎಲ್ಲಾ ವ್ಯವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕೆಂಬ ನಿಯಮವಿಲ್ಲ. ತುಳು ಒಂದು ಸುಂದರ ವ್ಯವಹಾರಿಕ ಭಾಷೆ. ಆದರೆ ಗ್ರಾಂಥಿಕ ಭಾಷೆಯಲ್ಲ. ದೇವಭಾಷೆ ಎನಿಸಿರುವ ಸಂಸ್ಕೃತ ಗ್ರಾಂಥಿಕ ಭಾಷೆಯಾಗಿದೆ. ಆದರೆ ಯಾವ ಪ್ರದೇಶದಲ್ಲಿಯೂ ವ್ಯಾವಹಾರಿಕವಾಗಿಲ್ಲ. ನವ ಶಿಲಾಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಜಿಸಿ, ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಯನ್ನು ಹೊಂದಲು ಪ್ರಾರಂಭಿಸಿದಂದಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಓದು ಬರಹ ಬಾರದೇ ಇದ್ದರೂ ತಾನು ಕೆಲಸಕ್ಕೆ ಹೋದ ದಿನಗಳನ್ನು ದಿನನಿತ್ಯ ಗೋಡೆಯ ಮೇಲೆ ಒಂದೊಂದು ಗೆರೆ ಎಳೆದು ಗುರುತಿಸಿ, ಕೊನೆಯಲ್ಲಿ ಲೆಕ್ಕ ಹಾಕಿ, ಸಂಬಳ ಪಡೆಯುತ್ತಿದ್ದನು. ಇದನ್ನು ಲಿಪಿಯ ಉಗಮ ಕಾಲ ಎನ್ನುವರು.

**ಪ್ರಶ್ನೆಗಳು** :

ಅ) ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಗಳಗಿರುವ ವ್ಯತ್ಯಾಸಗಳೇನು ?

ಆ) ಲಿಪಿಯ ಉಗಮ ಹೇಗಾಯಿತು ?

XIV) **ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಯಾವುದಾದರೂ ಒಂದಕ್ಕೆ ಪತ್ರವನ್ನು ಬರೆಯಿರಿ** 1 x 5 = 5

44) ನಿಮ್ಮ ಶಾಲೆಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ಕೋರಿ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರ ಬರೆಯಿರಿ.

: **ಅಥವಾ** :

ನಿಮ್ಮನ್ನು ಸಂಕೇಶ್ವರದ ಕನ್ಯಾ ಪ್ರೌಢ ಶಾಲೆಯಲ್ಲಿ ಓದುತ್ತಿರುವ 'ಕೋಮಲ' ಎಂದು ಭಾವಿಸಿಕೊಂಡು ನೀವು ಮಾಡಿರುವ ಶೈಕ್ಷಣಿಕ ಪ್ರವಾಸದ ಕುರಿತು ಮುಧೋಳದಲ್ಲಿರುವ ನಿಮ್ಮ ಚಿಕ್ಕಮ್ಮ 'ಕವಿತಾ' ಗೆ ಪತ್ರವನ್ನು ಬರೆಯಿರಿ.

XV) **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ನಿಬಂಧ ಬರೆಯಿರಿ** 1 x 5 = 5

45) ಭಯೋತ್ಪಾದನೆ ಮತ್ತು ನಿರ್ಮೂಲನೆ

: **ಅಥವಾ** :

ಅಕ್ಷರದಾಸೋಹ ಮತ್ತು ಕ್ಷೀರಭಾಗ್ಯಗಳ ಸಾಮಾಜಿಕ ಮಹತ್ವ

<><><><><>

**9 ನೆಯ ತರಗತಿಯ ಮಾದರಿ ಪ್ರಶ್ನೆ ಪತ್ರಿಕೆ : 2019-20**

ವಿಷಯ : **ಪ್ರಥಮ ಭಾಷೆ – ಕನ್ನಡ** (01-K) **6**

ಸಮಯ : 3-00 ಗಂಟೆ, ಅಂಕಗಳು : 100

---

**ಸೂಚನೆಗಳು : * ಪ್ರಶ್ನೆ ಪತ್ರಿಕೆಯು 45 ಪ್ರಶ್ನೆಗಳನ್ನು ಒಳಗೊಂಡಿದೆ. * ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. * ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.**

I) **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ.** 6 x 1 = 6

1) ವ್ಯಾಪಾರಿಯಾದ ಅನಂತಮೂರ್ತಿಯವರು ತಮ್ಮ ಊರು ಸಿದ್ಧಾಪುರಕ್ಕೆ ನಡೆದುಕೊಂಡು ಹೋದರು – ಈ ವಾಕ್ಯದಲ್ಲಿರುವ ಅನ್ವರ್ಥನಾಮಪದ ..............

ಎ) ವ್ಯಾಪಾರಿ ಬಿ) ಅನಂತಮೂರ್ತಿ

ಸಿ) ತಮ್ಮ ಡಿ) ಸಿದ್ಧಾಪುರ

2) ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆ ಬಳಸುವರು

ಎ) ಅರ್ಧವಿರಾಮ ಬಿ) ಪ್ರಶ್ನಾರ್ಥಕ

ಸಿ) ಅಲ್ಪವಿರಾಮ ಡಿ) ಉದ್ಧರಣ

3) 'ಕಟ್ಟು' ಧಾತುವಿನ ವಿಧ್ಯರ್ಥಕ ರೂಪ

ಎ) ಕಟ್ಟಲಿ ಬಿ) ಕಟ್ಟನು

ಸಿ) ಕಟ್ಟಿಯಾರು ಡಿ) ಕಟ್ಟು

4) ಬೇಹಾರಿ – ಪದದ ತತ್ಸಮ ರೂಪ

ಎ) ಬಿಹಾರಿ ಬಿ) ಬೇಪಾರಿ

ಸಿ) ವ್ಯಾಪಾರಿ ಡಿ) ವ್ಯವಹಾರಿ

5) ಒಂದು ವ್ಯಂಜನಾಕ್ಷರಕ್ಕೆ ಒಂದು ಸ್ವರಾಕ್ಷರ ಸೇರಿ ಆಗುವ ಅಕ್ಷರವನ್ನು ............ ಎನ್ನುವರು.

ಎ) ಅಲ್ಪಪ್ರಾಣ ಬಿ) ಗುಣಿತಾಕ್ಷರ

ಸಿ) ಸಂಯುಕ್ತಾಕ್ಷರ ಡಿ) ಯೋಗವಾಹ

6) 'ತಕರಾರು' ಈ ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ

ಎ) ಹಿಂದೂಸ್ಥಾನಿ ಬಿ) ಉರ್ದು

ಸಿ) ಅರಬ್ಬೀ ಡಿ) ಪೋರ್ಚುಗೀಸ್

II) **ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದಂತೆ ಪದವನ್ನು ಬರೆಯಿರಿ** 4 x 1 = 4

7) ಅಂಜಿಕೆ : ಕೃದಂತ ಭಾವನಾಮ : :
ಶಾಲೆಯತನಕ : ................

8) ವಿದ್ಯಾರ್ಥಿ : ತ–ಗಣ : :
ಕಾಗದ : ................

9) ಮುಂಗೈ : ಅಂಶಿ ಸಮಾಸ : :
ಸಪ್ತಸಾಗರ : ................

10) ಅಷ್ಟು : ಪರಿಮಾಣವಾಚಕ : :
ಹನ್ನೆರಡು : ................

III) **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** 7 x 1 = 7

11) ಗಿರಿಧರನಾಗರನನ್ನು ಪೂಜಿಸಿದ ಸ್ಥಳ ಯಾವುದು ?

12) ಇಂಗ್ಲೆಂಡಿನಲ್ಲಿರುವ ಹಳೆಯ ವಿಶ್ವವಿದ್ಯಾಲಯ ಯಾವುದು ?

13) ಚೋಳಮಂಡಲದ ಪ್ರಸಿದ್ಧ ದೊರೆ ಯಾರು ?

14) ದುರ್ಯೋಧನನ ಗುರುಪುತ್ರನ ಹೆಸರೇನು ?

15) ಏನನ್ನು ತೊರೆದು ಬಾಳಬೇಕು ?

16) ಬುದ್ಧನು ಲುಂಬಿನಿಯ ಬನಕ್ಕೆ ಯಾವ ರೀತಿ ಬರಬೇಕು?

17) ಕವಿಯಿತ್ರಿಯು ಬತ್ತಿ ಆಗಲು ಬಯಸಿದ್ದೇಕೆ ?

IV) **ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 10 x 2 = 20

18) ಕನ್ನಡ ಮೌಲ್ವಿಯ ವೇಷಭೂಷಣ ಹೇಗಿತ್ತು ?

19) ಹುಸೇನ ಕೃಷ್ಣನ ಅಭಿನಯದ ಬಗ್ಗೆ ತಿಳಿಸಿ.

20) ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಸ್ಟಾಲಿನ್ ಅವರು ಏನು ಹೇಳಿದರು ?

21) ತಲಕಾಡಿನ ಲೂಟಿಯ ವಿಚಾರದಲ್ಲಿ ವಿಷ್ಣುವರ್ಧನನ ನಿಲುವೇನು ?

22) ಎಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು?

23) ಈ ಹಾಡು ಹೊಸತು ಎಂದು ಕವಿ ಹೇಳಲು ಕಾರಣವೇನು ?

24) ಪಂಢರಿಬಾಯಿ ಅವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು ?

25) ನಾಗರಪಂಚಮಿ ಹಬ್ಬದ ಸಡಗರ ಬರೆಯಿರಿ

26) ದುರ್ಗಪ್ಪನ ಯಾವ ಮಾತುಗಳು ಹೋರಾಟಗಾರರ ಕೈಕಾಲು ಉಕ್ಕಿನಂಗೆ ಆಗುವಂತೆ ಮಾಡುತ್ತಿದ್ದವು ?

27) 'ಪುಟ್ಟ ಹಕ್ಕಿ' ಪದ್ಯದ ಭಾವಾರ್ಥವನ್ನು ಬರೆಯಿರಿ.

V) **ಕೆಳಗಿನ ಸಾಹಿತಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ ಬಿರುದುಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ** 2 x 3 = 6

28) ಭಾಸ

29) ಸು. ರಂ. ಎಕ್ಕುಂಡಿ

VI) **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ** 1 x 3 = 3

30) ಅತಿಶಯ ಪದಾರ್ಥ ನಿಕರ
ಪ್ರತೀತಿಯಂ ಪಡೆವ ಪಾದ ವಿನ್ಯಾಸಂ ಭೂ ॥

VII) **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ** 1 x 3 = 3

31) ಶಾನುಭೋಗರು ಕುಲಾಲ ಚಕ್ರದಂತೆ ತಿರುಗುತ್ತಿದ್ದರು.

VIII) **ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಅದರ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ** 1 x 3 = 3

32) ಕೈ ಕೆಸರಾದರೆ ಬಾಯಿ ಮೊಸರು **– ಅಥವಾ –**
ಉಪ್ಪಿಗಿಂತ ರುಚಿಯಿಲ್ಲ ; ತಾಯಿಗಿಂತ ಬಂಧುವಿಲ್ಲ.

IX) **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ** 6 x 3 = 18

33) "ಗಂಡಸರೂ ರಂಗುರಾಯರೇ"

34) ಬಸ್ತಿಗಳಿಗೆ ಶ್ರೀವೈಷ್ಣವರು ಶಾಸನವ ನಟ್ಟು ಪಾಲಿಸುವರು

35) ವೀರಭದ್ರದೇವರು ಹುಟ್ಟಿದ ರೂಪ ಎಂತು ಎಂದೊಡೆ

36) ಬಯಲಿನಲಿ ಬಂಧನ ಮೆಚ್ಚಳಾ ತಾಯಿ

37) ಮಹಾತ್ಮರ ಕೈಗೆ ಬೆತ್ತ ನಾನಾದೆ

38) ಕಳದ ಸಿಗುರಿನ ಕಬ್ಬಿನಂದದಿ

X) **ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ** 1 x 4 = 4

39) ಅಯ್ಯಯ್ಯ ..........................
..............................................
..............................................
.......................... ಕೇಳಬೇಕಣ್ಣ ।
ಅಂಬುಜವೆಲ್ಲವು .................
..............................................
..............................................
............................ ಮರೆದುದಲ್ಲಲ್ಲಿ ।

**ಅಥವಾ**

XI) **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ** 1 x 4 = 4

40) ರವಿಕುಲದ ಪೀಳಗೆಯೊಳೊಗೆದ ರಾಯರ್ಗೆ ಪ
ಟ್ಟವ ಕಟ್ಟುವಂದಿದಿಲ್ಲದಡರಸುತನ ಸಲ್ಲ
ದವನಿಯೊಳು ಯುದ್ಧರಂಗದೊಳದಂ ಕಂಡ ಹಗೆಗಳು
ನಿಲ್ಲರಿದಱ ಕೆಳಗೆ

XII) **ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರ ಬರೆಯಿರಿ** 2 x 4 = 8

41) ವೃದ್ಧಮಾಹೇಶ್ವರನನ್ನು ಕವಿ ಹೇಗೆ ವರ್ಣಿಸಿದ್ದಾನೆ ?

: **ಅಥವಾ** :

ಮದುವೆ ಮಂಟಪದಲ್ಲಿ ವೃದ್ಧನು ಮಾಡಿದ ಅವಾಂತರಗಳಾವುವು ?

42) 'ನಿಯತಿಯನಾರ್ ಮೀರಿದಪರ್' ಪದ್ಯದ ಸಾರಾಂಶ ನಿಮ್ಮ ಮಾತುಗಳಲ್ಲಿ ಬರೆಯಿರಿ.

: **ಅಥವಾ** :

'ನಿಯತಿಯನಾರ್ ಮೀರಿದಪರ್' ಪದ್ಯದ ಆಶಯ ಭಾವವನ್ನು ಬರೆಯಿರಿ.

XIII) **ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ** 2 + 2 = 4

43) ಯಾವುದೇ ಒಂದು ಪ್ರದೇಶದ ಅಭಿವೃದ್ಧಿಗೆ ರೂಪಿಸುವ ಕಾರ್ಯಕ್ರಮ ಹೇಗಿರಬೇಕು ಎಂಬ ವಿಷಯವನ್ನು "ಚಿಪ್ಕೊ ಚಳುವಳಿ" ಜನರಿಗೆ ಮತ್ತು ಸರಕಾರಕ್ಕೆ ಬಹು ಚೆನ್ನಾಗಿ ಮನದಟ್ಟು ಮಾಡಿಕೊಡುತ್ತದೆ. ಅಭಿವೃದ್ಧಿಯ ಕಾರ್ಯಕ್ರಮಗಳಿಂದ ಪರಿಸರ ಹಾಳಾಗಬಾರದು, ಪರಿಸರಕ್ಕೆ ಪೂರಕವಾಗಿರಬೇಕು. ವಿನಾಶವಿಲ್ಲದ ಅಭಿವೃದ್ಧಿಯೇ ನಮ್ಮ ಗುರಿಯಾಗಬೇಕು. ಇದು ಚಿಪ್ಕೊ ಚಳುವಳಿಯ ಮೂಲ ಮಂತ್ರ. ಅರಣ್ಯಗಳು ಮರಮಟ್ಟುಗಳನ್ನು, ರಾಳವನ್ನು ಒದಗಿಸುವ ಬೃಹತ ಆಗರ. ಇದು ಸರಕಾರದ ವಾಣಿಜ್ಯ ದೃಷ್ಟಿ. ಅರಣ್ಯಗಳು ನೆಲದ ಸಾರವನ್ನು ರಕ್ಷಿಸುವ, ನೀರನ್ನು ಹಿಡಿದಿಡುವ, ಪರಿಸರವನ್ನು ಶುಚಿಯಾಗಿಡುವ ಬೃಹತ್ ನೈಸರ್ಗಿಕ ವ್ಯವಸ್ಥೆ ಕೂಡ. ಇದು ಜನ ಸಾಮಾನ್ಯರ ದೃಷ್ಟಿ. ಈ ಎರಡೂ ದೃಷ್ಟಿಗಳ ಅರ್ಥಪೂರ್ಣ ಸಮ್ಮೇಳನಕ್ಕೆ ಚಿಪ್ಕೊ ಚಳುವಳಿ ಶ್ರಮಿಸುತ್ತಿದೆ. ಆಧುನಿಕ ಉಪಕರಣಗಳಿಂದ ಸಜ್ಜಾದ ವೃತ್ತಪತ್ರಿಕೆಗಳು, ಸಿನೇಮಾ, ರೇಡಿಯೋ, ದೂರದರ್ಶನ ಮುಂತಾದ ಮಾಧ್ಯಮಗಳು ಸಾಧಿಸಲಾರದ ಕೆಲಸವನ್ನು ಚಿಪ್ಕೊ ಸದಸ್ಯರು ಬೆಟ್ಟಗಾಡು ಪ್ರದೇಶದಲ್ಲಿ ಕಾಲ್ನಡಿಗೆಯಲ್ಲಿ ನಡೆದು ಸಾಧಿಸಿದ್ದಾರೆ. ಚಿಪ್ಕೊ ತಂಡದ ಹಳ್ಳಿಯ ಜನರಿಗೆ ಮೂಲಭೂತವಾಗಿ ಎರಡು ಕಾರ್ಯಕ್ರಮಗಳನ್ನು ರೂಪಿಸಿದೆ. ಮೊದಲನೆಯದು ಬೆಟ್ಟಗಾಡು ಪ್ರದೇಶಗಳಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಮರ ಕಡಿಯುವುದನ್ನು ತಡೆಯುವುದು. ಎರಡನೆಯದು ಆಹಾರ, ಮೇವು, ಸೌದೆ, ನಾರು ಈ ನಾಲ್ಕು ಅವಶ್ಯಕತೆಗಳನ್ನು ಪೂರೈಸುವಂಥ ಮರಗಳನ್ನು ನೆಡುವುದು. ಈ ಎರಡೂ ಕಾರ್ಯಗಳು ಇಂದು ಹಿಮಾಲಯ ಪರ್ವತ ಪ್ರದೇಶದ ನೂರಾರು ಹಳ್ಳಿಗಳಲ್ಲಿ ಅತ್ಯಂತ ಜನಪ್ರೀಯವಾಗಿದೆ. ಚಿಪ್ಕೊ ಚಳುವಳಿಯ ಅಸಾಧಾರಣ ಯಶಸ್ಸಿನ ಗುಟ್ಟೆಂದರೆ ಅದು ಜನರಿಂದ, ಜನರ ಒಳತಿಗಾಗಿ ಹುಟ್ಟಿ ಬೆಳೆದ ಆಂದೋಲನವಾಗಿದೆ.

**ಪ್ರಶ್ನೆಗಳು** :

ಅ) ಯಾವ ಎರಡು ದೃಷ್ಟಿಕೋನಗಳ ಸಮ್ಮೇಳನಕ್ಕೆ ಚಿಪ್ಕೊ ಚಳುವಳಿ ಶ್ರಮಿಸುತ್ತಿದೆ ?

ಆ) ಚಿಪ್ಕೊ ಚಳುವಳಿಯನ್ನು ಜನಪ್ರೀಯಗೊಳಿಸಿದ ಎರಡು ಕಾರ್ಯಕ್ರಮಗಳು ಯಾವುವು ?

XIV) **ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಯಾವುದಾದರೂ ಒಂದಕ್ಕೆ ಪತ್ರವನ್ನು ಬರೆಯಿರಿ** 1 x 5 = 5

44) ನಿಮ್ಮನ್ನು ಅಥಣಿ ಸರಕಾರಿ ಪ್ರೌಢ ಶಾಲೆಯ ಆರ್ಯ ಎಂದು ಭಾವಿಸಿಕೊಂಡು ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ವ್ಯವಸ್ಥಾಪಕರಿಗೆ ಪ್ರದರ್ಶನದ ವೇಳೆಯನ್ನು ತಿಳಿಸುವಂತೆ ಕೋರಿ ಮನವಿ ಪತ್ರ ಬರೆಯಿರಿ.

: **ಅಥವಾ** :

ನಿಮ್ಮನ್ನು ಚಿಕ್ಕೋಡಿಯ ಬಸವೇಶ್ವರ ಪ್ರೌಢ ಶಾಲೆಯ ವಿದ್ಯಾರ್ಥಿ ಆರಾಧ್ಯ ಎಂದು ಭಾವಿಸಿಕೊಂಡು ಬೆಳಗಾವಿಯ ಶ್ರೀನಗರದ ನಿವಾಸಿ ಪುಷ್ಪಾ ಎಂಬ ನಿಮ್ಮ ತಾಯಿಗೆ ಕ್ಷೇಮ ಸಮಾಚಾರ ತಿಳಿಸುತ್ತ ಪತ್ರ ಬರೆಯಿರಿ.

XV) **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ನಿಬಂಧ ಬರೆಯಿರಿ** 1 x 5 = 5

45) ನನ್ನ ನೆಚ್ಚಿನ ಪುಸ್ತಕ

: **ಅಥವಾ** :

ಸಾಮಾಜಿಕ ಪಿಡುಗುಗಳು

<><><><><>